# ಆಯ್ದ ಗಾದೆಗಳು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಮಾತು ಗಾದೆಗಳ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಗಾದೆಗಳು ಅನುಭವದ ಸಾರ ಸಂಗ್ರಹವಾಗಿವೆ. ಆದ್ದರಿಂದ ಇವುಗಳನ್ನು ಕಲಿತು ಸಮಯೋಚಿತವಾಗಿ ಮಾತಿನಲ್ಲಿ ಮತ್ತು ಬರವಣಿಗೆಯಲ್ಲಿ ಬಳಸಿದಾಗ ವಿಶೇಷ ಪರಿಣಾಮವುಂಟಾಗುತ್ತದೆ. ವಿಶೇಷವಾಗಿ ಸಾಹಿತ್ಯ ವಿದ್ಯಾರ್ಥಿಗಳ ಲೇಖನಗಳಿಗೆ ಹೆಚ್ಚಿನ ತೂಕ ಬರುತ್ತದೆ. ಗಾದೆಗಳನ್ನು ಅರಿತು ಉತ್ತಮ ಜೀವನ ನಡೆಸುವುದು ಸಾಧ್ಯವಾಗದು. ಆದರೆ ಅವುಗಳು ಮನುಷ್ಯನ ಸ್ವಭಾವವನ್ನು ಅರಿಯಲು ಸಹಕಾರಿಯಾಗಿದೆ. ನಮ್ಮ ಅನೇಕ ತಪ್ಪುಗಳನ್ನು ತಿದ್ದಿಕೊಂಡು ಭವಿಷ್ಯತ್ತಿನಲ್ಲಿ ಉಂಟಾಗುವ ಮುಜುಗರದ ಪ್ರಸಂಗಗಳನ್ನು ತಪ್ಪಿಸಿಕೊಳ್ಳಬಹುದು. ಏಕೆಂದರೆ ಗಾದೆಗಳು ಸಾರ್ವಕಾಲಿಕ ಸತ್ಯಗಳಾಗಿವೆ.

1 ಪ್ರೀತಿ ಕಡಿಮೆಯಾದಾಗ ದೋಷ ದೊಡ್ಡದೆನಿಸುತ್ತದೆ.
2 ಬಾಯಿಯಿದ್ದವ ಬರದಲ್ಲೂ ಗೆಲ್ಲುತ್ತಾನೆ.
3 ಬಾಯಲ್ಲಿ ಬೆಣ್ಣೆ, ಕೈಯಲ್ಲಿ ದೊಣ್ಣೆ.
4 ಬಾಯಾರಿದಾಗ ಬಾವಿ ತೋಡೋಕೆ ಹೋದ್ರು.
5 ಬಾಯಾರಿದೋನ ಬಳಿಗೆ ಭಾಗೀರತಿ ಬಂದಂಗೆ.
6 ಬಾಣಲೆಯಿಂದ ಬೆಂಕಿಗೆ ಬಿದ್ದಹಾಗೆ.
7 ಬೆಳ್ಳಗಿರುವುದೆಲ್ಲಾ ಹಾಲಲ್ಲ.
8 ಬೆಳೆಯುವ ಗುಣ ಮೊಳಕೇಲಿ ನೋಡು.
9 ಬೇವಿನ ಮರ ಹಾಕಿ ಮಾವಿನ ಹಣ್ಣಿಗೆ ಆಸೆಪಟ್ಟ ಹಾಗೆ.
10 ಬೇಲಿ ಎದ್ದು ಹೊಲ ಮೇಯ್ದ ಹಾಗೆ.
11 ಬೊಗಳುವುದರಿಂದ ಕಚ್ಚುವ ಕೆಲಸ ತಪ್ಪುತ್ತದೆ.
12 ಬೆಂಕಿ ಇದ್ದಲ್ಲಿ ಹೊಗೆ, ಹೊಗೆ ಇದ್ದಲ್ಲಿ ಬೆಂಕಿ.
13 ಬೆಟ್ಟ ಅಗೆದು ಇಲಿ ಹಿಡಿದ ಹಾಗೆ.
14 ಬೆಕ್ಕಿನ ಕತ್ತಿಗೆ ಗಂಟೆ ಕಟ್ಟುವವರು ಯಾರು.
15 ಬೆಕ್ಕಿಲ್ಲದ ಮನ್ಯಾಗ ಇಲಿ ಲಾಗ ಹೊಡಿತಂತೆ.
16 ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ.
17 ಲಾಭವಿಲ್ಲದ ವ್ಯಾಪಾರವು ಸಿಹಿಯಿಲ್ಲದ ಕಲ್ಲುಸಕ್ಕರೆಯಂತೆ.
18 ಲಾಲಿಸಿದರೆ ಮಕ್ಕಳು ಪೂಜಿಸಿದರೆ ದೇವರು.
19 ಸಪ್ಪೆಯನ್ನಕ್ಕಿಂತ ಉಪ್ಪು ಗಂಜಿ ಲೇಸು.
20 ಸಾವಿಲ್ಲದ ಮನೆ ಇಲ್ಲ, ಸೋಲಿಲ್ಲದ ಮನುಷ್ಯ ಇಲ್ಲ.
21 ಸಾಲ ಶತ್ರುತ್ವವನ್ನು ಬೆಳೆಸುತ್ತದೆ.